

# ಅಪ್ಪನನ್ನು ಕೋವಿಡ್ ನುಂಗಿಬಿಡ್ತು

**ಋತು**
**ಉದಯದ ‘ಕಸ್ತೂರಿ ನಿವಾಸ’ದ ಸತ್ಯಭಾಮ**

◆ **ನಟನೆಯ ಹವ್ಯಾಸ ಹೇಗೆ ಬೆಳೆಯಿತು?**

ನಾನು ನಟಿ ಆಗುತ್ತೇನೆ ಎಂದುಕೊಂಡಿರಲಿಲ್ಲ. ಶಾಲೆಯಲ್ಲಿ ಏನಾದರೂ ಕಾರ್ಯಕ್ರಮಗಳು ಇದ್ದರೆ ಹಿಂದೆ ಹೋಗಿ ನಿಂತಿರುತ್ತಿದ್ದೆ. ನಮ್ಮ ತಂದೆ ಸರ್ಕಾರಿ ಉದ್ಯೋಗಿ. ಆದರೆ ಅವರಿಗೆ ರಂಗ ಆಸಕ್ತಿ ಇತ್ತು. ಹಳ್ಳಿಯ ಹಬ್ಬ–ಹರಿದಿನ, ಉತ್ಸವಗಳಲ್ಲಿ ಪೌರಾಣಿಕ ನಾಟಕಗಳನ್ನು ಆಡುತ್ತಿದ್ದರು. ಅದರಲ್ಲಿ ನಮ್ಮ ಅಪ್ಪ ಪ್ರಧಾನ ಪಾತ್ರವನ್ನು ನಿರ್ವಹಿಸುತ್ತಿದ್ದರು. ಅಪ್ಪ ಒಳ್ಳೆಯ ನಟ ಎಂದು ಊರಲ್ಲಿ ಪ್ರಸಿದ್ಧರಾಗಿದ್ದರು. ನನ್ನ ತಮ್ಮ ಮಿಮಿಕ್ರಿ ಕಲಾವಿದ. ನನ್ನ ಅಪ್ಪ ಅವನಿಗೆ ತರಬೇತಿ ನೀಡುತ್ತಿದ್ದಾಗ ನಾನು ಅಣಕಿಸುತ್ತಿದ್ದೆ. ಅಪ್ಪ ಬೈಯುತ್ತಿದ್ದರು. ಕಲೆ ಅಭ್ಯಾಸಕ್ಕೆ ಅಡ್ಡಿಪಡಿಸಬಾರದು ಎಂದು ತಿದ್ದುತ್ತಿದ್ದರು. ಹೀಗಿದ್ದ ನಾನೂ ನಟಿಯಾದೆ ಅನ್ನುವುದು ಕೌತುಕವೇ ಸರಿ.

◆ **ನಿಮ್ಮ ಕುಟುಂಬದ ಹಿನ್ನೆಲೆಯನ್ನು ನೆನಪಿಸಿಕೊಳ್ಳಬಹುದಾ?**

ತಂದೆಯ ಊರು ಕುಣಿಗಲ್ ಹತ್ತಿರದ ತರಿಕೆರೆ ಎಂಬ ಪುಟ್ಟ ಗ್ರಾಮ. ಕೆಲಸ ಸಿಕ್ಕ ನಂತರ ಬೆಂಗಳೂರಿಗೆ ಬಂದಿದ್ದಾರೆ. ಇದುವರೆಗೂ ಹೇಳದ ಸತ್ಯ ಏನೆಂದರೆ, ನಮ್ಮ ತಂದೆ ಇಬ್ಬರನ್ನು ಮದುವೆ ಆಗಿದ್ದರು. ಅವರ ಹೆಸರು ಟಿ.ಆರ್. ಚಿಕ್ಕಣ್ಣ, ದೊಡ್ಡಮ್ಮ (ಗಂಗಾ) ಅಪ್ಪನಿಗಿಂತ ವಯಸ್ಸಿನಲ್ಲಿ ಸ್ವಲ್ಪ ದೊಡ್ಡವರಂತೆ. ತುಂಬ ಶ್ರೀಮಂತ ಕುಟುಂಬದ ಹೆಣ್ಣುಮಗಳು. ಅವರಿಗೆ ಹೆಣ್ಣು ಮಗು ಹುಟ್ಟಿ ಮೂರೇ ತಿಂಗಳಿನಲ್ಲಿ ತೀರಿಹೋಗಿದೆ. ಅದಾಗಿ ಕೆಲದಿನಗಳಿಗೆ ದೊಡ್ಡಮ್ಮ ಕೂಡ ಪಾರ್ಶ್ವವಾಯು ರೀತಿಯ ರೋಗಕ್ಕೆ ತುತ್ತಾಗಿ ಹಾಸಿಗೆ ಹಿಡಿದಿದ್ದಾರೆ.

ತಂದೆಗೆ ತುಂಬ ಕಷ್ಟ ಆಗಿದೆ. ಅವರ ಕ್ಷೇಮವನ್ನು ನೋಡಬೇಕು. ಕೆಲಸವನ್ನು ಮಾಡಬೇಕು. ಆಗ ಎರಡನೇ ಮದುವೆ ಆಗಲು ನಮ್ಮ (ಚಂದ್ರಿಕಾ) ಅಮ್ಮನನ್ನು ಕೇಳಲು ಬಂದಿದ್ದಾರೆ. ಆಕೆಯನ್ನು ಅವರು ರಸ್ತೆಯಲ್ಲಿ ಹೋಗುವಾಗ ಒಮ್ಮೆ ಶಿಳ್ಳೆ ಹಾಕಿ ಕಾಡಿಸಿದ್ದರಂತೆ. ಆಗ ನಮ್ಮ ಅಮ್ಮ ಬೈದಿದ್ದರಂತೆ. ಅಮ್ಮನಿಗೆ ಎರಡನೇ ಸಂಬಂಧ ಇಷ್ಟ ಇರಲಿಲ್ಲವಂತೆ. ಎರಡನೇ ಹೆಂಡತಿಯಾಗಿ ಹೋಗಲಾರೆ ಎಂದು ಹಟಹಿಡಿದಿದ್ದರಂತೆ. ಯಾವುದನ್ನೂ ಲೆಕ್ಕಿಸದೆ ಅವರ ಪೋಷಕರು ಮದುವೆ ಮಾಡಿದ್ದಾರೆ. ಮದುವೆಯ ನಂತರ ನಮ್ಮ ದೊಡ್ಡಮ್ಮನನ್ನು ನನ್ನ ಅಮ್ಮನಿಂದ ನೋಡಿಕೊಳ್ಳಲು ಆಗಿಲ್ಲ. ಆಗ ಅವರ ಅಮ್ಮ ಅಂದರೆ ನನ್ನ ಅಜ್ಜಿ ಅವರ ಕ್ಷೇಮವನ್ನು ನೋಡಿದ್ದಾರೆ. ಅದೇ ಸಮಯದಲ್ಲಿ ತಂದೆಗೆ ಮತ್ತೊಂದು ಕಂಟಕ ಎದುರಾಗಿದೆ. ಅದು ಕಾನೂನಿಗೆ ಸಂಬಂಧಿಸಿದ್ದು. ಸರ್ಕಾರಿ ನೌಕರ ಒಂದೇ ಮದುವೆ ಆಗಬೇಕು. ನಮ್ಮಪ್ಪನ ಸಹೋದ್ಯೋಗಿ ಎರಡನೇ ಮದುವೆ ಆಗಿದ್ದಾರೆ ಎಂದು ದೂರು ನೀಡಿದ್ದಾರೆ. ಆಗ ದೊಡ್ಡಮ್ಮ ನನ್ನ ಪತಿಗೆ ಒಂದು ಕಪ್ ಕಾಫಿ ಕೂಡ ಕೊಡಲು ಸಾಧ್ಯ ಇಲ್ಲ. ನಾನು ಬದುಕುತ್ತೀನೋ ಇಲ್ಲವೋ ಗೊತ್ತಿಲ್ಲ. ನನ್ನ ಸ್ವ ಇಚ್ಛೆಯಿಂದಲೇ ಮದುವೆ ಮಾಡಿಸಿದ್ದು ಎಂದು ಹೇಳಿಕೆ ಕೊಟ್ಟಿದ್ದರು. ತಂದೆ ಕೆಲಸಕ್ಕಾಗಿ ಊರೂರು ಸುತ್ತಾಟದ ಸಂದರ್ಭದಲ್ಲಿ ನಮ್ಮ ಅಜ್ಜಿ ಮನೆಯಲ್ಲೇ ದೊಡ್ಡಮ್ಮ ತೀರಿಕೊಂಡಿದ್ದರಂತೆ. ಅವರು ತೀರಿದ ನಂತರ ನಮ್ಮ ದೊಡ್ಡಕ್ಕ ಹುಟ್ಟಿದಳು. ನಾವು ನಾಲ್ವರು ಹೆಣ್ಣುಮಕ್ಕಳು ಒಬ್ಬ ತಮ್ಮನಿದ್ದಾನೆ. ಈ ಕಥೆ ಎಷ್ಟೋ ವರ್ಷಗಳ ಕಾಲ ನನಗೆ ಗೊತ್ತಿರಲಿಲ್ಲ. ಮೊದಲ ಬಾರಿ ಕೇಳಿದಾಗ ಅಚ್ಚರಿಯಾಗಿತ್ತು.

◆ **ಧಾರಾವಾಹಿಗೆ ಮೊದಲ ಪ್ರವೇಶ ಹೇಗಾಯಿತು?**

ಡಿಡಿಯಲ್ಲಿ ಒಂದು ಸೀರಿಯಲ್‌ಗೆ ಅವಕಾಶ ಬಂತು. ಆದರೆ ಅದು ಪ್ರಸಾರವೇ ಆಗಲಿಲ್ಲ. ಉದಯದಲ್ಲಿ ನಟಿಸಿದ ‘ಮಳೆ’ ನನ್ನ ಮೊದಲ ಧಾರಾವಾಹಿ. ಈ ಅವಕಾಶ ಸಿಕ್ಕಿದ್ದು, ಎಂ.ಎಂ. ಲಕ್ಷ್ಮಿದೇವಿ ಅವರ ಮೊಮ್ಮಗಳು ದಿವ್ಯಾ ನನ್ನ ಗೆಳತಿ. ಆಡಿಷನ್‌ಗೆ ಒತ್ತಾಯದಿಂದ. ನಟನೆ ಬರಲ್ಲ ಎಂಬ ಭಯದಲ್ಲಿದ್ದ ನನಗೆ ಅವಳು ಧೈರ್ಯ ತುಂಬಿದಳು. ನಂತರ ‘ಕುಸುಮಾಂಜಲಿ’, ‘ಕಾಮಧೇನು’ನಲ್ಲಿ ಮಾಡಿದೆ. ಅಮ್ಮ 2013ರಲ್ಲಿ ತೀರಿಕೊಂಡರು. ಕಾಕತಾಳೀಯ ಅಂದರೆ ಆಗ ನನ್ನ ಧಾರಾವಾಹಿಗಳು ನಿಂತೇ ಬಿಟ್ಟವು. ಸುವರ್ಣದಲ್ಲಿ ‘ಕ್ಲಾಸ್‌ಮೇಟ್’ ಮಾಡುತ್ತಿದ್ದೆ ಅದೂ ನಿಂತಿತು. ಕೆಲಸ ಇಲ್ಲದೆ ಮನೆಯಲ್ಲಿ ಕುಳಿತಿದ್ದೆ. ನನ್ನ ಕಥೆಯೇ ಮುಗಿದು ಹೋಯಿತು ಎಂದುಕೊಂಡಿದ್ದೆ. ಅಮ್ಮನ ಚಿಂತೆಯಿಂದ ಹೊರಬರಲು ‘ಪುಟ್ಟಗೌರಿ’ಯ ಅವಕಾಶ ತುಂಬ ಸಹಾಯ ಮಾಡಿತು. ಅಲ್ಲಿಂದ ನನ್ನ ಹೊಸ ಜೀವನ ಆರಂಭವಾಯಿತು.

◆ **ಸತ್ಯಭಾಮ ಪಾತ್ರದ ಬಗ್ಗೆ ಹೇಳುವುದಾದರೆ.**

ಈಕೆ ಅನಾಥಾಶ್ರಮದಲ್ಲಿ ಬೆಳೆದ ಹುಡುಗಿ. ಕಸ್ತೂರಿನಿವಾಸದ ಒಡತಿ ಪಾರ್ವತಿ ಆಕೆಯನ್ನು ತಮ್ಮ ಮೊದಲನೇ ಮಗನಿಗೆ ಮದುವೆ ಮಾಡಿಸುತ್ತಾರೆ. ಅವರ ಮನೆತನ ತುಂಬ ದೊಡ್ಡದು. ಅಲ್ಲಿಗೆ ಅನಾಥಾಶ್ರಮದಿಂದ ಸೊಸೆ ತರುತ್ತಾರೆ. ಸತ್ಯಭಾಮ ಹಳ್ಳಿ ಮನೋಭಾವದ ಹುಡುಗಿ. ಅತ್ತೆ ಅಂದರೆ ತುಂಬ ಭಯ–ಭಕ್ತಿಯನ್ನು ತೋರಿಸುತ್ತಾಳೆ. ‘ಕಸ್ತೂರಿನಿವಾಸ’ ತಂಡ ಅಂದರೆ ನನಗೆ ತವರು ಮನೆಯ ಅನುಭವವನ್ನು ನೀಡುತ್ತದೆ. ನಾನು ಈ ಪಾತ್ರ ನಿರ್ವಹಿಸುವ ಸಮಯಕ್ಕೆ ಗರ್ಭಧರಿಸಿದೆ. ಅಲ್ಲೇ ಸೀಮಂತ ಮಾಡಿದರು. ಅಮ್ಮ ಇಲ್ಲ ಎನ್ನುವ ಕೊರಗು ಕಾಡಲೇ ಇಲ್ಲ.

◆ **ಚಿಕ್ಕವಯಸ್ಸಿನಲ್ಲಿ ನಿಮ್ಮ ಆಸೆಗಳು?**

ಚಿಕ್ಕವಯಸ್ಸಿನಲ್ಲಿ ಕನಸು ಕಟ್ಟಿ ಬದುಕಿಲ್ಲ. ಕೆಲವು ವರ್ಷ ನಮ್ಮ ಅಜ್ಜಿ ಮನೆಯಲ್ಲಿ ಬೆಳೆದಿದ್ದೆ. ನಮ್ಮ ಪೋಷಕರಿಗೆ ಐದುಮಕ್ಕಳ ಪೋಷಣೆ ಕಷ್ಟವಾಗಿತ್ತು. ಅಜ್ಜಿ ಮತ್ತು ಮಾವ ಅಂದರೆ ಇಷ್ಟ ಆದರೂ ನಾನು ತುಂಬ ನೊಂದುಕೊಳ್ಳುತ್ತಿದ್ದೆ. ಏಕೆಂದರೆ ಅಪ್ಪ–ಅಮ್ಮನ ಜೊತೆ ಇರಬೇಕು, ಅವರ ಜೊತೆ ಮಲಗಬೇಕು. ನನಗೆ ಏನೂ ಕಡಿಮೆ ಇರಲಿಲ್ಲ. ಆದರೆ ಅಪ್ಪ–ಅಮ್ಮನ ಅಪ್ಪುಗೆಯಿಲ್ಲ ಎಂಬ ಕೊರಗು ಇತ್ತು. ಬಿಟ್ಟರೆ ಅಂತಹ ಮಹತ್ವ ಆಕಾಂಕ್ಷೆಯನ್ನು ಎಂದೂ ಕಂಡಿರಲಿಲ್ಲ. ಮನೆಯವರ ಪ್ರೀತಿಯನ್ನು ಅನುಭವಿಸುವುದೇ ದೊಡ್ಡ ಆಸೆ. ನನ್ನ ಅಪ್ಪ 11 ತಿಂಗಳ ಹಿಂದೆ ಕೋವಿಡ್‌ಗೆ ಬಲಿಯಾದರು. ನಾನಾಗ 45 ದಿನಗಳ ಬಾಣಂತಿ. ನಮ್ಮ ತಂದೆಯನ್ನು ಮುಟ್ಟಲು ಆಗಲಿಲ್ಲ ಎಂಬ ನೋವು ಈಗಲೂ ಇದೆ.

■ **ರಾಘವೇಂದ್ರ ಕೆ.**